**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

ಅಸಲು ದಾವೆ ಸಂಖ್ಯೆ 213/2021

ಪಿ.ಡಬ್ಲ್ಯೂ.01

ಸಾಕ್ಷಿಗೆ ಇಂದು ದಿನಾಂಕ 06-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಪಿ ಎಮ ವಿ ವಕೀಲರಿಂದ

ನನ್ನ ತಂದೆ ಮಹಾಲಿಂಗಪ್ಪ ರವರು 2007 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದರೆ ಸರಿ. ಅವರಿಗೆ ನಾವು ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಅವರನ್ನು ಈ ಕೇಸಿನಲ್ಲಿ ಪಾರ್ಟಿ ಮಾಡಿರುವುದಿಲ್ಲ. ಏಕೆಂದರೆ ಅವರನ್ನು ಮದುವೆ ಮಾಡಿಕೊಟ್ಟ ನಂತರ ಈ ದಾವಾ ಜಮೀನು ಬಂದಿರುತ್ತದೆ. ಒಬ್ಬರು ಮದುವೆಯು 1988 ಮತ್ತು 89 ರಲ್ಲಿ ಮತ್ತೊಬ್ಬರದ್ದು 1984 ರಲ್ಲಿ ಮದುವೆ ಆಗಿರುತ್ತದೆ. ಶಂಕರಪ್ಪ ರವರ ಮದುವೆ 1995 ರಲ್ಲಿ ಆಗಿರುತ್ತದೆ. ನನ್ನ ಮೊದಲನೇ ಮದುವೆ 2005 ರಲ್ಲಿ ಮತ್ತು ಎರಡನೇ ಮದುವೆ 2015 ರಲ್ಲಿ ಆಗಿರುತ್ತದೆ ಎಂದರೆ ಸರಿ. ಶಂಕರಪ್ಪ ರವರ ಮದುವೆ ಆಗುವಾಗ ನಮ್ಮ ಮನೆತನಕ್ಕೆ ಯಾವುದೇ ಆಸ್ತಿಗಳು ಇರಲಿಲ್ಲ. ಶಂಕರಪ್ಪ ರವರು ಎಂದರೆ ಪ್ರತಿವಾದಿ ನಂ.1 ರವರು ಮದುವೆ ಆದ ನಂತರ 2 ವರ್ಷಕ್ಕೆ ಬೇರೆ ಬೇರೆ ಆಗಿ ದುಡಿದ್ದು ತಿನ್ನುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲರೂ ಕುಡಿಯೇ ಇದ್ದೆವು ಎಂದು ಸಾಕ್ಷಿ ನುಡಿಯುತ್ತಾರೆ. ನಾವು ಎಲ್ಲರೂ ಕೂಡಿ ಇದ್ದ ಬಗ್ಗೆ ರೇಷನ ಕಾರ್ಡನ್ನು ಹಾಜರು ಪಡಿಸಿರುತ್ತೇನೆ. ವೋಟರ ಲಿಸ್ಟ ಹಾಜರು ಪಡಿಸಿರುವುದಿಲ್ಲ. ಮಹಾಲಿಂಗಪ್ಪರವರು ಮನೆತನದಲ್ಲಿ ಏಕತ್ರ ಕುಟುಂಬ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಕೂಡಿ ಇದ್ದೆವು ಎಂದು ನುಡಿಯುತ್ತಾರೆ ನಾನು 2016-17 ರಲ್ಲಿ ಮನೆಯಿಂದ ಹೊರಗೆ ಬಂದಿರುತ್ತೇನೆ ಎಂದರೆ ಸರಿ. ಆಗ ಯಾವುದೇ ಪಾಲು ವಾಟ್ನಿ ಆಗಿರುವುದಿಲ್ಲ. ಈ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ. ದಾವಾ ಜಮೀನು ಶಂಕರಪ್ಪ ರವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೂಡಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರಕಾರದವರು ದಿನಾಂಕ 13-11-1997 ರಲ್ಲಿ ಜಮೀನು ಉಳುವವರಿಗೆ ಶರತ್ತು ವಿದಿಸಿ ಜಮೀನುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಶಂಕರಪ್ಪರವರಿಗೆ ಯಾವುದೇ ಜಮೀನು

ಇಲ್ಲ ಎಂದು ದಾವಾ ಆಸ್ತಿಗಳನ್ನು ಅವರ ಹೆಸರಿಗೆ ಸರಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 18-04-1998 ರಲ್ಲಿ ರೇವೆನ್ಯೂ ಇನ್ಸಪೆಕ್ಟರವರು ಪ್ರತಿವಾದಿ ನಂ.1 ರವರಿಗೆ ಕಬ್ಜಾ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1992 ರ ಇಸ್ವಿಯಲ್ಲಿ ಕಬ್ಜಾ ಕೊಟ್ಟಿದ್ದು, 1998 ರಲ್ಲಿ ಉತಾರ ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ME 2820 ದಿನಾಂಕ 05-05-98 ರಲ್ಲಿ ಆಗಿರುತ್ತದೆ ಎಂದರೆ ಸರಿ. ಆ ಪ್ರಕಾರ ಶಂಕರಪ್ಪ ರವರು ಮಾಲೀಕರು ಆಗಿದ್ದು ಕಬ್ಜೆಯಲ್ಲಿ ಇದ್ದು, ಉತಾರನಲ್ಲಿ ಆ ಹೆಸರು ದಾಖಲಾಗಿರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಯು ನಾವು ಹೊಲದಲ್ಲಿ ಉಳುಮೆ ಮಾಡಿದ್ದೆನೆ ಎಂದು ಹೇಳುತ್ತಾರೆ. ಶಂಕರಪ್ಪ ರವರು ಆ ಪ್ರಕಾರ ಬ್ಯಾಂಕಗಳಲ್ಲಿ ಸಾಲ ಮಾಡಿ ಜಮೀನುಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲಗಳು ಉತಾರನಲ್ಲಿ ರುಣಗಳು ಎಂದು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಾನು ಮನೆ ಕಟ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರತಿವಾದಿ ನಂ.1 ರವರು ತನ್ನ ಸ್ವಂತಕ್ಕೆ ಮತ್ತು ನನಗೆ ಎರಡು ಮನೆಗಳು ಕಟ್ಟಿಸಿರುತ್ತಾರೆ ಎಂದು ಹೇಳುತ್ತಾರೆ.

ನಾನು 30 ರಿಂದ 40 ಲಕ್ಷ ರೂ.ಗಳನ್ನು ಜಮೀನಿನ ಅಭಿವೃದ್ದಿಗೊಸ್ಕರ ಖರ್ಚು ಮಾಡಿರುತ್ತೇನೆ ಸದರಿ ಹೊಲದಲ್ಲಿ ದುಡಿದ್ದು ಆಗಿರುತ್ತದೆ. ಪೈಪ ಲೈನ ಮಾಡುತ್ತಿದ್ದೆ. ಆ ಬಗ್ಗೆ ಯಾವುದೇ ಕಾಗದ ಪತ್ರಗಳು ಇರುವುದಿಲ್ಲ. ಕೂಲಿ ಕೆಲಸ ಮಾಡಿ ಜಮೀನನ್ನು ಅಭಿವೃದ್ದಿ ಮಾಡಿರುವ ವಿಚಾರ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

1998 ರ ಇಸ್ವಿಯಲ್ಲಿ ಜಮೀನನ್ನು ಮಂಜೂರು ಮಾಡುವಾಗ ನನ್ನ ತಂದೆ ಬದುಕಿದ್ದರು. ನಮ್ಮ ತಂದೆಯವರು ಜೀವಂತ ಇದ್ದಾಗ ಅರ್ಜಿ ಕೊಟ್ಟಿದ್ದರು ಆದರೆ ಅದು ಯಾವುದು ಮಂಜೂರು ಆಗಿರುವುದಿಲ್ಲ, ಆದ ಕಾರಣ ಪ್ರತಿವಾದಿ ನಂ.1 ರವರು ಹೆಸರಿನಲ್ಲಿ ಅರ್ಜಿ ಕೊಟ್ಟಿದ್ದೆವು ಆಗ ಮಂಜೂರ ಆಗಿರುತ್ತದೆ. ಪ್ರತಿವಾದಿ ನಂ.1 ರವರು ಬೇರೆ ವಾಸ ಮಾಡಿಕೊಂಡಿದ್ದು ತನ್ನ ಕುಟುಂಬಕ್ಕೆ ಸಂಬಂಧಪಟ್ಟಿದ್ದಕ್ಕೆ ಅರ್ಜಿ ಕೊಟ್ಟಿದ್ದ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1/3 ನೇ ಹಿಸ್ಸೆ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಅಸಲು ದಾವೆ ಸಂಖ್ಯೆ 213/2021

ಪಿ.ಡಬ್ಲ್ಯೂ.01

ನನ್ನ ತಾಯಿ ತನ್ನಷ್ಟಕ್ಕೆ ತಾನೇ ಬದುಕುತ್ತಿದ್ದರು ಎಂದರೆ ಸರಿಯಲ. ಹೊಲದಲ್ಲಿ ಎಲ್ಲರೂ ಕೂಡಿಯೇ ಇದ್ದೆವು ಎಂದು ಹೇಳುತ್ತಾರೆ. VPC no.431/22 ಮತ್ತು 458 ಇವುಗಳನ್ನು ಪಂಚಾಯ್ತಿಯವರು ನಮ್ಮ ತಾಯಿಯವರ ಹೆಸರಿನಲ್ಲಿ ಹಚ್ಚಿರುತ್ತಾರೆ ಎಂದರೆ ಸುಳ್ಳು. ನಮ್ಮ ತಂದೆ-ತಾಯಿಯವರು ಸದರಿ ಜಾಗದಲ್ಲಿ ಶೆಡ್ ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ಕಟ್ಟಿಸಿಕೊಂಡಿದ್ದರು ಎಂದು ಹೇಳುತ್ತಾರೆ. VPC no.210 ಒಂದು ತಿಪ್ಪಿ ಜಾಗ ಇದ್ದ, ಅದರಲ್ಲಿ ನಾನು ಮತ್ತು ನಮ್ಮ ಅಣ್ಣ ಇಬ್ಬರು ಧನ ಕಟ್ಟುತ್ತಿದ್ದೆವು ಎಂದರೆ ಸರಿಯಲ್ಲ. ಪಂಚಾಯಿತಿಯವರು ನನ್ನ ಮತ್ತು ನನ್ನ ಅಣ್ಣನ ಹೆಸರಿನಲ್ಲಿ VPC no.210 ನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದು ನನ್ನ ತಂದೆಯ ಮರಣದ ನಂತರ ನನ್ನ ಮತ್ತು ಪ್ರತಿವಾದಿ ನಂ.1 ರವರು ಹೆಸರಿನಲ್ಲಿ ಜಂರು ಆಗಿರುತ್ತದೆ ಎಂದು ಹೇಳುತ್ತಾರೆ. ಈ ಸಂಬಂಧಿ ನಾನು ಸರಕಾರಿ ದಾಖಲೆಗಳನ್ನು ಹಾಜರು ಪಡಿಸುತ್ತೇನೆ. ದಾವಾ ಜಮೀನಿನಲ್ಲಿ ಶಂಕರಪ್ಪ ರವರು ಕಬ್ಬು ಬೆಳೆ ಬೆಳೆಯತ್ತಾರೆ ಎಂದರೆ ಸಾಕ್ಷಿಯ ಇಬ್ಬರು ಕೂಡಿ ಬೆಳೆಯುತ್ತೇವೆ ಎಂದು ಹೇಳುತ್ತಾರೆ. ಅವುಗಳನ್ನು ಶಂಕರಪ್ಪ ರವರು ಸಕ್ಕರೆ ಪಾಕ್ಟರಿಗೆ ಕಳಹಿಸುತ್ತಾರೆ ಎಂದರೆ ಸಾಕ್ಷಿಯು ತನ್ನ ಹೆಳರಿನಲ್ಲಿ ಕಳುಹಿಸುತ್ತಾರೆ ಎಂದು ನುಡಿಯುತ್ತಾರೆ, ದಾವಾ ಜಮೀನಿಗೆ ಸಂಬಂಪಟ್ಟಂತೆ ಕಂದಾಯವನ್ನು ಶಂಕರಪ್ಪ ರವರು ತುಂಬುತ್ತಾರೆ ಎಂದರೆ ಸಾಕ್ಷಿಯು ಸುಳ್ಳು, ಇಬ್ಬರು ಕೂಡಿ ತುಂಬಿರುತ್ತೆವೆ ಎಂದು ಹೇಳುತ್ತಾರೆ. ದಾವಾ ಜಮೀನಿನಲ್ಲಿ ಪ್ರತಿವಾದಿ ನಂ.1 ರವರು ಬೊರ್ ಹಾಕಿಸಿದ್ದು, ವಿದ್ಯುಚ್ಛಕ್ತಿ ಪಡೆದು ಕೊಂಡಿರುತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದಮರೆದು ಬೋರ್ ಇರುವುದಿಲ್ಲ ಎಂದು ಹೇಳುತ್ತಾರೆ. ಶಂಕರಪ್ಪ ರವರು ತಹಶೀಲ್ದಾರವರಗೆ ಒಂದು ಅರ್ಜಿ ಕೊಟ್ಟಿದ್ದು, ತಹಶೀಲ್ದಾರವರು 15 ವರ್ಷಗಳ ವರೆಗೆ ಪರಭಾರೆ ಮಾಡಬಾರದು ಎಂದು ವಿದಿಸಿದ್ದ ಶರತ್ತುಗಳನ್ನು ಕಡಿಮೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನುಗಳು ಶಂಕರಪ್ಪ ರವರು ಸ್ವಂತ ಆಸ್ತಿ ಆಗಿದ್ದು, ಅದರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಹಾಲಿಂಗಪ್ಪರವರು ಪ್ರತಿವಾದಿ ನಂ.1 ರವರು ವಿರುದ್ದ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ 1 ಎಕರೆ ನಮ್ಮ ಅಣ್ಣನಿಗೆ 1 ಎಕರೆ ಎಂದು

ಬಾಯಿ ಮಾತಿನಲ್ಲಿ ನುಡಿಯುತ್ತಾರೆ. ಸದರಿ 1997 ರ ಇಸ್ವಿಯಲ್ಲಿದಾವಾ ಜಮೀನು ಪ್ರತಿವಾದಿ





ನಂ.1 ರವರು ಹೆಸರಿಗೆ ದಾಖಲಾಗಿತ್ತು ಎಂದು ಹೇಳುತ್ತಾರೆ. ಅಲ್ಲಿಂದ ಇಲ್ಲಿಯವರೆಗೆ ಆತನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಪ್ರತಿವಾದಿ ನಂ.1 ರವರು ದಾವಾ ಜಮೀನಿನಲ್ಲಿ ಸಾಕಷ್ಟು ಅಭಿವೃದ್ದಿ ಮಾಡಿ ದುಡಿದಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ